# ಕರ್ನಾಟಕ ವಿಧಾನ ಪರಿಷತ್

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 929 |
| ಸದಸ್ಯರ ಹೆಸರು | ಶ್ರೀ ಯು.ಬಿ.ವೆಂಕಟೇಶ್ |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr>
<td>ಅ)</td>
<td>ರಾಜ್ಯದಲ್ಲಿರುವ 'ಎ', 'ಬಿ' ಮತ್ತು 'ಸಿ' ದರ್ಜೆಯ ಮುಜರಾಯಿ ದೇವಸ್ಥಾನಗಳ ಸಂಖ್ಯೆ ಎಷ್ಟು; ಈ ದೇವಸ್ಥಾನಗಳು ಹೊಂದಿರುವ ಚರ ಮತ್ತು ಸ್ಥಿರ ಆಸ್ತಿಗಳೆಷ್ಟು; ಈ ಚರ ಮತ್ತು ಸ್ಥಿರ ಮೂಲಗಳಿಂದ ಬರುತ್ತಿರುವ ಆದಾಯ ಎಷ್ಟು; (ದೇವಸ್ಥಾನವಾರು ಮಾಹಿತಿಯನ್ನು ಪ್ರತ್ಯೇಕವಾಗಿ ನೀಡುವುದು)</td>
<td>
ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆಗೆ ರಾಜ್ಯದ ಒಟ್ಟು 34,563 ದೇವಸ್ಥಾನಗಳು ಒಳಪಟ್ಟಿರುತ್ತವೆ. ಸದರಿ ದೇವಸ್ಥಾನಗಳನ್ನು ಆಯಾ ದೇವಾಲಯಗಳ ಆದಾಯಕ್ಕನುಗುಣವಾಗಿ ಪ್ರವರ್ಗ 'ಎ' 'ಬಿ' ಮತ್ತು 'ಸಿ' ದೇವಾಲಯಗಳೆಂದು ವರ್ಗೀಕರಿಸಲಾಗಿದೆ.
<table>
<tr><th>ಪ್ರವರ್ಗ</th><th>ವಿವರ</th><th>ಸಂಸ್ಥೆಗಳ ಸಂಖ್ಯೆ</th></tr>
<tr><td>ಎ</td><td>ವಾರ್ಷಿಕ ವರಮಾನವು ರೂ. ಇಪ್ಪತ್ತೈದು ಲಕ್ಷಗಳನ್ನು ಮೀರಿದ ಸಂಸ್ಥೆಗಳು</td><td>205</td></tr>
<tr><td>ಬಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರಿ ರೂ. ಇಪ್ಪತ್ತೈದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>193</td></tr>
<tr><td>ಸಿ</td><td>ವಾರ್ಷಿಕ ವರಮಾನವು ರೂ. ಐದು ಲಕ್ಷಗಳನ್ನು ಮೀರದ ಸಂಸ್ಥೆಗಳು</td><td>34165</td></tr>
<tr><td colspan="2">ಒಟ್ಟು</td><td>34563</td></tr>
</table>
ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಪ್ರವರ್ಗ 'ಎ' 205 ದೇವಾಲಯಗಳು ಪ್ರವರ್ಗ 'ಬಿ' 193 ದೇವಾಲಯಗಳು ಮತ್ತು ಪ್ರವರ್ಗ 'ಸಿ' 34,165 ದೇವಾಲಯಗಳು ಇದ್ದು ಈ ದೇವಾಲಯಗಳ ಸಾವಿರಾರು ಎಕರೆ ಭೂಮಿಯು ಇನಾಂ ರದ್ದಿಯಾತಿ ಕಾಯ್ದೆ ಮತ್ತು ಭೂಸುಧಾರಣಾ ಕಾಯ್ದೆಯಡಿಯಲ್ಲಿ ಪರಭಾರೆಯಾಗಿರುತ್ತವೆ. ಸದರಿ 'ಬಿ' ಮತ್ತು 'ಸಿ' ವರ್ಗದ ದೇವಾಲಯಗಳ ಸ್ವತ್ತುಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು ಹಾಗೂ ತಾಲ್ಲೂಕು ತಹಶೀಲ್ದಾರ್ ರವರೇ ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ. ಅಲ್ಲದೆ ಭೂ ನ್ಯಾಯ ಮಂಡಳಿಯ ಅಧ್ಯಕ್ಷರು ಸಂಬಂಧಪಟ್ಟ ಉಪವಿಭಾಗದ ಉಪ ವಿಭಾಗಾಧಿಕಾರಿ/ ಸಹಾಯಕ ಆಯುಕ್ತರು ಆಗಿದ್ದು, ಕಂದಾಯ ಇಲಾಖೆ ತಾಲ್ಲೂಕು ತಹಶೀಲ್ದಾರ್ ರವರು ಸದಸ್ಯ ಕಾರ್ಯದರ್ಶಿಯಾಗಿರುತ್ತಾರೆ.
ಕರ್ನಾಟಕ ರಾಜ್ಯಪತ್ರ ಅಧಿಸೂಚನೆ ಸಂಖ್ಯೆ:ಸಂವ್ಯಶಾ 52 ಶಾಸನ 2021, ಬೆಂಗಳೂರು, ದಿನಾಂಕ:18.01.2022 ಕರ್ನಾಟಕ ಕೆಲವು ಇನಾಮುಗಳ ರದ್ದಿಯಾತಿ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ಅಧಿನಿಯಮ, 2021ರ ಪ್ರಾರಂಭದ ದಿನಾಂಕದಿಂದ ಒಂದು ವರ್ಷದೊಳಗಾಗಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ದೇವಾಲಯಕ್ಕೆ ಸೇರಿರುವ ಮತ್ತಷ್ಟು ಇನಾಂ ಜಮೀನುಗಳು ರೀಗ್ರ್ಯಾಂಟ್ ಆಗುವ ಸಾಧ್ಯತೆ ಇದೆ.
ಪ್ರಸ್ತುತ ರಾಜ್ಯದಲ್ಲಿ ಧಾರ್ಮಿಕ ದತ್ತಿ ಇಲಾಖೆಯ ಅಧೀನಕ್ಕೆ ಒಳಪಟ್ಟಿರುವ ಪ್ರವರ್ಗ "ಎ" ಮತ್ತು "ಬಿ" ಅಧಿಸೂಚಿತ ದೇವಸ್ಥಾನ/ ಸಂಸ್ಥೆಗಳಿಗೆ ಸಂಬಂದಿಸಿದಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಕಾರ್ಯಾಲಯದಿಂದ ಮತ್ತು ದೇವಾಲಯಗಳ ಕಾರ್ಯನಿರ್ವಾಹಕ ಅಧಿಕಾರಿಯವರು ಜನವರಿ 2024 ರ ಅಂತ್ಯಕ್ಕೆ ಸಲ್ಲಿಸಿರುವ ಸ್ಥಿರಾಸ್ತಿಯ ಮಾಹಿತಿಯಂತೆ ಪ್ರವರ್ಗ "ಎ" 205 ದೇವಾಲಯಗಳ ಒಟ್ಟು ಸ್ಥಿರಾಸ್ತಿ 6,323 ಎಕರೆ ಹಾಗೂ ಪ್ರವರ್ಗ "ಬಿ" 193 ದೇವಾಲಯಗಳ ಒಟ್ಟು ಸ್ಥಿರಾಸ್ತಿ 1,555
</td>
</tr>
</table>

| ಪ್ರಶ್ನೆ | ಉತ್ತರ |
|---|---|

ಎಕರೆ ಇರುತ್ತದೆ. ಸದರಿ ಜಿಲ್ಲಾವಾರು, ಮಾಹಿತಿಯನ್ನು **ಅನುಬಂಧ-01 ಮತ್ತು ಅನುಬಂಧ-02** ರಲ್ಲಿ ಒದಗಿಸಿದೆ ಹಾಗೂ ಅಧಿಸೂಚಿತ ದೇವಾಲಯಗಳ ಪೈಕಿ, ಪ್ರವರ್ಗ "ಸಿ" ಒಟ್ಟು 34,165 ದೇವಾಲಯಗಳು ಹೊಂದಿರುವ ಆಸ್ತಿಯ ಬಾಬ್ತು ಇನಾಂ ಜಮೀನುಗಳ ಪಹಣಿಗಳಲ್ಲಿ ಮಂಜೂರಾತಿಗಳನ್ನು ಇಂಡೀಕರಿಸಿ ದೇವಾಲಯಕ್ಕೆ ಉಳಿದಿರುವ ಜಮೀನುಗಳ ಬಾಬ್ತು ಜಿಲ್ಲಾಧಿಕಾರಿಗಳು ಅಧಿಸೂಚನೆ ಹೊರಡಿಸಿದ ನಂತರದಲ್ಲಿ ಸ್ಪಷ್ಟ ಹಾಗೂ ನಿಖರ ಮಾಹಿತಿ ಲಭ್ಯವಾಗಲಿದೆ.

ರಾಜ್ಯದಾದ್ಯಂತ ಇರುವ ಅಧಿಸೂಚಿತ ದೇವಾಲಯದ ಸ್ವತ್ತುಗಳು ಆಯಾಯ ಜಿಲ್ಲೆಯಲ್ಲಿನ ಗ್ರಾಮಠಾಣಾ/ ಪಂಚಾಯಿತಿ/ ಪುರಸಭೆ/ ನಗರಸಭೆ/ ಮಹಾನಗರ ಪಾಲಿಕೆ/ ಬೃಹತ್ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವುದರಿಂದ, ಸದರಿ ವ್ಯಾಪಿಯಲ್ಲಿ ಇರುವ ಅಧಿಸೂಚಿತ ದೇವಾಲಯಗಳ ಸ್ವತ್ತುಗಳ(ಖಾಲಿಜಾಗ/ನಿವೇಶನ/ಕಟ್ಟಡ/ಮಳಿಗೆಗಳು/ ಕಲ್ಯಾಣ ಮಂಟಪ/ ಸಮುದಾಯ ಭವನ/ಅತಿಥಿ ಗೃಹಗಳು ಇತ್ಯಾದಿ) ಮೌಲ್ಯ ನಿರ್ಧರಣೆಯನ್ನು ಅಲ್ಲಿನ ಸ್ಥಳೀಯ ಮಾರುಕಟ್ಟೆ ದರಕ್ಕನುಗುಣವಾಗಿ ಸಕ್ಷಮ ಪ್ರಾಧಿಕಾರಿಗಳು (ನೋಂದಣಿ ಮತ್ತು ಮುದ್ರಾಂಕ ಇಲಾಖೆ & ಲೋಕೋಪಯೋಗಿ ಇಲಾಖೆ) ರವರಿಂದ ನಿರ್ಧರಿಸಲ್ಪಡುವುದರಿಂದ, ಅಲ್ಲದೇ ಕಾಲ ಕಾಲಕ್ಕೆ ಸ್ವತ್ತುಗಳ ಮೌಲ್ಯಗಳಲ್ಲಿ ಬದಲಾವಣೆಯಾಗುವುದರಿಂದ ಧಾರ್ಮಿಕ ದತ್ತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು 34563 ಮುಜರಾಯಿ ದೇವಾಲಯಗಳ ಸ್ವತ್ತುಗಳ ನಿಖರ ಮೌಲ್ಯವನ್ನು ಕಲೆಹಾಕಲು ಸಾಧ್ಯವಾಗಿರುವುದಿಲ್ಲ, ಈ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

ರಾಜ್ಯಾದ್ಯಂತ ಇರುವ ಬಹುತೇಕ ಅಧಿಸೂಚಿತ ದೇವಾಲಯಗಳಲ್ಲಿ ಇರುವ ಚಿನ್ನ, ಬೆಳ್ಳಿ, ಮುತ್ತು, ರತ್ನ, ವಜ್ರ, ವೈಢೂರ್ಯ ಮತ್ತು ಪಚ್ಚೆಯಂತಹ ಅಮೂಲ್ಯ ವಸ್ತುಗಳು ಅತೀ ಪುರಾತನದ್ದಾಗಿವೆ ಮತ್ತು ರಾಜಮಹಾರಾಜರ ಕಾಲದಿಂದಲೂ ಸಹ ದೇವಾಲಯಗಳಲ್ಲಿ ಬಳಕೆಯಾಗುತ್ತಿದ್ದು, ಇವುಗಳನ್ನು ಮೌಲ್ಯಮಾಪನಕ್ಕೆ ಒಳಪಡಿಸಿ ಇಂದಿನ ದರಕ್ಕೆ ನಿಖರ ಮೌಲ್ಯವನ್ನು ನಿರ್ಧರಿಸುವುದು ಕಷ್ಟಸಾಧ್ಯ ಆಗಿರುತ್ತದೆ.

ಅಧಿಸೂಚಿತ ದೇವಾಲಯಗಳ ಪೈಕಿ ಪ್ರಸ್ತುತ ಪ್ರವರ್ಗ 'ಎ' ಮತ್ತು 'ಬಿ' ದೇವಾಲಯಗಳ ಸ್ಥಿರ ಮತ್ತು ಚರಾಸ್ತಿಯಿಂದ ಬಂದ ಕಳೆದ ಮೂರು ವರ್ಷಗಳ ಆದಾಯದ ವಿವರ ಈ ಕೆಳಕಂಡತಿದೆ.

**(ರೂ ಲಕ್ಷಗಳಲ್ಲಿ)**

| ಪ್ರವರ್ಗ | 2021-22ನೇ ಸಾಲು | 2022-23ನೇ ಸಾಲು | 2023-24ನೇ ಸಾಲು |
|---|---|---|---|
| ಎ | 42189.67 | 67555.05 | 70918.90 |
| ಬಿ | 2492.34 | 3331.98 | 3072.95 |
| **ಒಟ್ಟು** | **44682.01** | **70887.03** | **73991.85** |

ದೇವಸ್ಥಾನವಾರು ಮಾಹಿತಿಯನ್ನು ಪ್ರತ್ಯೇಕವಾಗಿ **ಅನುಬಂಧ-03** ರಲ್ಲಿ ಒದಗಿಸಿದೆ. **ಅನುಬಂಧ 1, 2 ಮತ್ತು 3 ಅಗಾಧ ಪ್ರಮಾಣದಲ್ಲಿದ್ದು ಮಾನ್ಯ ಶಾಸಕರಿಗೆ ಪ್ರತ್ಯೇಕವಾಗಿ ಒದಗಿಸಲಾಗುವುದು.**

| ಪ್ರಶ್ನೆ | ಉತ್ತರ |
|---|---|
| ಆ) ಯಾವ ಯಾವ ದೇವಸ್ಥಾನಗಳ ಆಸ್ತಿಗಳನ್ನು ಖಾಸಗಿ ವ್ಯಕ್ತಿ/ಟ್ರಸ್ಟ್‌ಗಳಿಗೆ ಗುತ್ತಿಗೆ ನೀಡಲಾಗಿದೆ; ನೀಡಲಾಗಿದ್ದಲ್ಲಿ ವಿವರಗಳನ್ನು ಒದಗಿಸುವುದು; ಗುತ್ತಿಗೆ ನೀಡಿಕೆಯಿಂದಾಗಿ ಬರುತ್ತಿರುವ ಆದಾಯ ಎಷ್ಟು; | ರಾಜ್ಯದಲ್ಲಿನ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಪಡುವ ಅಧಿಸೂಚಿತ ದೇವಾಲಯಗಳು ಹೊಂದಿರುವ ಸ್ಥಿರಾಸ್ತಿಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಮತ್ತು ನಿಯಮಗಳು 2002ರನ್ವಯ ವಿವಿಧ ಉದ್ದೇಶಗಳಿಗಾಗಿ ಹಾಗೂ ಆದಾಯದ ಹಿತದೃಷ್ಟಿಯಿಂದ (ಖಾಲಿ ಜಾಗ ನಿವೇಶನ/ಕಟ್ಟಡ/ಮಳಿಗೆಗಳು/ಕಲ್ಯಾಣ ಮಂಟಪ/ಸಮುದಾಯ ಭವನ/ ಅತಿಥಿ ಗೃಹಗಳು ಇತ್ಯಾದಿ) ವ್ಯಕ್ತಿ/ಸಂಸ್ಥೆಗಳಿಗೆ ಗುತ್ತಿಗೆ ನೀಡಲಾಗಿದ್ದು, ಪ್ರಸ್ತುತ ಗುತ್ತಿಗೆ ನೀಡಿರುವ ಅಧಿಸೂಚಿತ ಸಂಸ್ಥೆಗಳ ವಿವರವನ್ನು **ಅನುಬಂಧ-04** ರಲ್ಲಿ ಸಿ.ಡಿ.ರೂಪದಲ್ಲಿ ಒದಗಿಸಿದೆ. |

| | ಪ್ರಶ್ನೆ | ಉತ್ತರ |
|---|---|---|
| | | ಪ್ರವರ್ಗ 'ಬಿ' ಮತ್ತು 'ಸಿ' ದೇವಾಲಯಗಳ ಒಟ್ಟು ಸಂಖ್ಯೆ-34358 ಇದ್ದು, ಈ ದೇವಾಲಯಗಳಿಗೆ ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್ ರವರು ಸಕ್ಷಮ ಪ್ರಾಧಿಕಾರಿಗಳಾಗಿರುತ್ತಾರೆ ಹಾಗೂ ಅಧಿಸೂಚಿತ ದೇವಾಲಯಗಳು ಹೊಂದಿರುವ ಸ್ಥಿರಾಸ್ತಿಯನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಮತ್ತು ನಿಯಮಗಳು 2002ರನ್ವಯ ಆಯಾಯ ದೇವಾಲಯಗಳು ಇರುವ ಸ್ಥಳದ ಸ್ಥಳೀಯ ಮಾರಕಟ್ಟೆ (ಲೋಕೋಪಯೋಗಿ ಇಲಾಖೆ/ನಗರ ಪಾಲಿಕೆ/ನಗರ ಸಭೆ/ಪುರಸಭೆ/ ಉಪನೋಂದಣಿ ಕಛೇರಿ) ದರದಂತೆ ಬಾಡಿಗೆ ನಿಗದಿಪಡಿಸಿ, ಗುತ್ತಿಗೆ ನೀಡಬೇಕಾಗಿರುತ್ತದೆ. ಆದ್ದರಿಂದ, ರಾಜ್ಯದ್ಯಂತ ಇರುವ ದೇವಾಲಯಗಳ ಆಸ್ತಿಗಳನ್ನು ಗುತ್ತಿಗೆ ನೀಡಿರುವುದಕ್ಕೆ ಬರುತ್ತಿರುವ ಆದಾಯದ ನಿಖರ ಮಾಹಿತಿ ಲಭ್ಯವಿರುವುದಿಲ್ಲ, ಮಾಹಿತಿ ಪಡೆಯಲು ಕ್ರಮ ವಹಿಸಲಾಗಿದೆ. |
| ಇ) | ಅವಧಿ ಮುಗಿದರೂ ಗುತ್ತಿಗೆ ಮುಂದುವರೆಸಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು; ಇದರಿಂದ ಸರ್ಕಾರಕ್ಕೆ ಆದ ನಷ್ಟದ ಪ್ರಮಾಣವೆಷ್ಟು? (ಸಂಪೂರ್ಣ ವಿವರ ನೀಡುವುದು) | ರಾಜ್ಯದಲ್ಲಿನ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಡುವ 34,563 ಅಧಿಸೂಚಿತ ದೇವಾಲಯಗಳ ಸ್ಥಿರ ಸ್ವತ್ತುಗಳನ್ನು ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ-1997 ಮತ್ತು ನಿಯಮಗಳು 2002ರನ್ವಯ ಗುತ್ತಿಗೆ ನೀಡಲು ಅವಕಾಶವಿದ್ದು, ನಿಯಮ 31 (17) ಅಡಿಯಲ್ಲಿ ಸ್ಥಿರ ಸ್ವತ್ತಿನ ಗುತ್ತಿಗೆದಾರನು ಗುತ್ತಿಗೆಯನ್ನು ನವೀಕರಿಸಲು ಇಚ್ಛಿಸಿದ್ದಲ್ಲಿ ನವೀಕರಣಕ್ಕೆ ಅವಕಾಶ ಕಲ್ಪಿಸಲಾಗಿದೆ.<br><br>ಅಲ್ಲದೇ, ಗುತ್ತಿಗೆ ಅವಧಿ ಪೂರ್ಣಗೊಂಡರೂ ಅನಧಿಕೃತವಾಗಿ ಮುಂದುವರೆಯುತ್ತಿರುವ ಗುತ್ತಿಗೆದಾರರ ವಿರುದ್ಧ ಕರ್ನಾಟಕ ಸಾರ್ವಜನಿಕ ಆವರಣದ (ಅನಧಿಕೃತ ಅಧಿಭೋಗದಾರರನ್ನು ಹೊರ ಹಾಕುವುದು) ಅಧಿನಿಯಮ, 1974ರಡಿಯಲ್ಲಿ ಪ್ರಕರಣ ದಾಖಲಾಗಿ ಅನಧಿಕೃತದಾರರನ್ನು ಖುಲ್ಲಾ ಪಡಿಸಲು ಆದೇಶವಾಗಿರುವ ಪ್ರಕರಣಗಳಲ್ಲಿಯೂ ಸಹ ಸದರಿ ಆದೇಶವನ್ನು ಪ್ರಶ್ನಿಸಿ ಗುತ್ತಿಗೆದಾರರು ಮಾನ್ಯ ಸಿವಿಲ್ ನ್ಯಾಯಾಲಯಗಳಲ್ಲಿ ಮೇಲ್ಮನವಿ ದಾಖಲಿಸಿ ಮುಂದುವರೆಯುತ್ತಿರುವುದರಿಂದ ಮಾನ್ಯ ನ್ಯಾಯಾಲಯವು ಪ್ರಕರಣಗಳನ್ನು ಇತ್ಯರ್ಥ ಪಡಿಸಿ ಬಾಕಿ ಬಾಡಿಗೆ ಪಾವತಿಸಲು ಅನಧಿಕೃತದಾರರಿಗೆ ನಿರ್ದೇಶನ ನೀಡದ ಹೊರತು ಅವಧಿ ಮುಗಿದರೂ ಗುತ್ತಿಗೆ ಮುಂದುವರೆಸಿರುವ ದೇವಸ್ಥಾನಗಳ ಆದಾಯದ ನಿಖರವಾದ ಅಂಕಿ ಅಂಶಗಳು ಲಭ್ಯವಿರುವಿಲ್ಲ. ಕ್ರೋಢೀಕೃತ ಮಾಹಿತಿ ಪಡೆಯಲು ಕ್ರಮ ವಹಿಸಲಾಗುತ್ತಿದೆ.<br><br>ರಾಜ್ಯದಲ್ಲಿನ ಮುಜರಾಯಿ ಇಲಾಖಾ ವ್ಯಾಪ್ತಿಗೆ ಒಳಡುವ ದೇವಾಲಯಗಳಲ್ಲಿ ಸಂಗ್ರಹವಾಗುವ ಆದಾಯವು ಆಯಾಯ ದೇವಾಲಯದ ಹೆಸರಿನಲ್ಲಿರುವ ಬ್ಯಾಂಕ್ ಖಾತೆಗಳಲ್ಲಿ ಜಮೆ ಮಾಡಲಾಗುತ್ತದೆ ಮತ್ತು ಆ ಆದಾಯವನ್ನು ದೇವಾಲಯದ ನಿರ್ವಹಣೆಗೆ ಮಾತ್ರ ಬಳಸುವುದರಿಂದ ಸರ್ಕಾರಕ್ಕೆ ಯಾವುದೇ ರೀತಿಯ ಆದಾಯವಾಗಲೀ ಅಥವಾ ನಷ್ಟವಾಗಲೀ ಆಗುವ ಪ್ರಶ್ನೆ ಉದ್ಭವಿಸುವುದಿಲ್ಲ. |

ಸಂಖ್ಯೆ: ಕಂಇ 94 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**